ಅನುಬಂಧ - II

5590(6473) : ಶ್ರೀ ಕಿರಣ್ ಕುಮಾರ್ ಕೆ.ಎಸ್. (ಕಳ್ಳಂಬೆಳ್ಳ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ, ಕಳ್ಳಂಬೆಳ್ಳ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವಂತಹ ಶಿರಾ, ಚಿಕ್ಕನಾಯಕನಹಳ್ಳಿ, ಗುಬ್ಬಿ ತಾಲ್ಲೂಕು ಭಾಗದಲ್ಲಿರುವ ತೋಟಗಾರಿಕಾ ಸಸ್ಯ ಕ್ಷೇತ್ರಗಳಾವುವು; (ವಿವರ ಒದಗಿಸುವುದು)

ಆ) ಈ ಪೈಕಿ ಬೆಳ್ಳಾರದಲ್ಲಿರುವ ಶ್ರೀ ಧರ್ಮವೀರ ಫಾರಂ ಅಸ್ಥಿತ್ವದಲ್ಲಿರುವುದು ನಿಜವೇ;

ಇ) ನಿಜವಾದಲ್ಲಿ, ಪ್ರಾರಂಭಿಸಿರುವುದು ಎಲ್ಲಿ, ಯಾವಾಗ, ಇದರ ವಿಸ್ತೀರ್ಣವೆಷ್ಟು, ಇಲ್ಲಿ ಬೆಳೆಯುವ ತೋಟಗಾರಿಕಾ ಬೆಳೆಗಳು ಯಾವುವು, ಇದರಿಂದ ಉತ್ಪತ್ತಿಯಾಗುವ ವಾರ್ಷಿಕ ವರಮಾನವೆಷ್ಟು; (ವಿವರಗಳನ್ನು ಒದಗಿಸುವುದು)

ಈ) ಪ್ರಾರಂಭದಿಂದ ಈವರೆಗೂ ಲಾಭದಲ್ಲಿ ನಡೆಯುತ್ತಿದೆಯೇ; ಇಲ್ಲದಿದ್ದಲ್ಲಿ ಇದನ್ನು ಮುಚ್ಚಲಾಗುವುದೇ;

ಉ) ಧರ್ಮವೀರ ಫಾರಂನಲ್ಲಿರುವ ಅಧಿಕಾರಿ ನೌಕರ–ಸಿಬ್ಬಂದಿಗಳೆಷ್ಟು; ಈ ಸಿಬ್ಬಂದಿಯ ಅವಶ್ಯಕತೆ ಇದೆಯೆ; (ವಿವರ ನೀಡುವುದು)

ಊ) ಹಾಗಿದ್ದಲ್ಲಿ ಈ ಫಾರಂ ಜಾಗವನ್ನು ಅರಣ್ಯ, ಬೆಳ್ಳಾರ ಚಿನ್ನದಗಣಿ ಪ್ರದೇಶಕ್ಕೆ ಅಥವಾ ಖಾಸಗೀಯವರಿಗೆ ನೀಡುವ ಪ್ರಸ್ತಾವವೇನಾದರೂ ಸರ್ಕಾರದ ಮುಂದಿದೆಯೇ? (ವಿವರ ಒದಗಿಸುವುದು)

ಶ್ರೀ ಆರ್. ಶ್ರೀನಿವಾಸ್ (ತೋಟಗಾರಿಕೆ ಸಚಿವರು):

ಅ) ತುಮಕೂರು ಜಿಲ್ಲೆ ಕಳ್ಳಂಬೆಳ್ಳ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವಂತಹ ಶಿರಾ, ಚಿಕ್ಕನಾಯಕನಹಳ್ಳಿ, ಗುಬ್ಬಿ ತಾಲ್ಲೂಕುಗಳಲ್ಲಿ ಒಟ್ಟು 6 ತೋಟಗಾರಿಕೆ ಕ್ಷೇತ್ರ/ನರ್ಸರಿಗಳಿದ್ದು ಅವುಗಳ ವಿವರಗಳು ಕೆಳಕಂಡಂತಿವೆ.

ಕ್ರ. ಸಂ.	ತೋಟಗಾರಿಕೆ ಕ್ಷೇತ್ರದ ಹೆಸರು	ತಾಲ್ಲೂಕು	ವಿಸ್ತೀರ್ಣ (ಎಕರೆ)
1	ಮುದಿಗೆರೆ ಕ್ಷೇತ್ರ	ಶಿರಾ	44.16
2	ಕಛೇರಿ ಸಸ್ಯಾಗಾರ	ಶಿರಾ	1.20
3	ಜೆ.ಸಿ. ಪುರ ಕ್ಷೇತ್ರ	ಚಿಕ್ಕನಾಯಕನಹಳ್ಳಿ	57.22
4	ಶ್ರೀಧರ್ಮವೀರ ಕ್ಷೇತ್ರ ಬೆಳ್ಳಾರ	ಚಿಕ್ಕನಾಯಕನಹಳ್ಳಿ	1325.00
5	ಹೇರೂರು ಕ್ಷೇತ್ರ	ಗುಬ್ಬಿ	32.20
6	ಕೆ. ಮತಿಘಟ್ಟ ಕ್ಷೇತ್ರ	ಗುಬ್ಬಿ	19.00

ಆ) ಹೌದು,

ಇ) ಬೆಳ್ಳಾರ ಗ್ರಾಮ ಚಿಕ್ಕನಾಯಕನಹಳ್ಳಿ ತಾಲ್ಲೂಕು ತುಮಕೂರು ಜಿಲ್ಲೆಯಲ್ಲಿ ಧರ್ಮವೀರ ಫಾರಂ ಅನ್ನು ದಿನಾಂಕ: 16.8.1971 ರಲ್ಲಿ ಪ್ರಾರಂಭಿಸಲಾಗಿದೆ. ಇದರ ಒಟ್ಟು ವಿಸ್ತೀರ್ಣ 1325 ಎಕರೆಗಳು. ಈ ಕ್ಷೇತ್ರದಲ್ಲಿ ತೆಂಗು, ಮಾವು, ಸಪೋಟ, ಸೀಮಾರೋಬ ಇತ್ಯಾದಿ ಬೆಳೆಗಳಿರುತ್ತವೆ.

ವಾರ್ಷಿಕ ವರಮಾನ ಕೆಳಗಿನಂತಿದೆ. ಈ ಕ್ಷೇತ್ರದಿಂದ 2004–05ನೇ ಸಾಲಿನಲ್ಲಿ ರೂ. 23,880 ವರಮಾನ ಬಂದಿರುತ್ತದೆ.

ಈ) ಇಲ್ಲ. ಮುಚ್ಚಲಾಗುವುದಿಲ್ಲ.

ಉ) ಈ ಘಾರಂನಲ್ಲಿ ಅಧಿಕಾರಿಗಳ 3 ಹುದ್ದೆ ಮತ್ತು ಸಿಬ್ಬಂದಿ 15 ಹುದ್ದೆಗಳಿರುತ್ತವೆ. ಈ ಹುದ್ದೆಗಳ ಅವಶ್ಯಕತೆಯನ್ನು ಪುನರ್ ಪರಿಶೀಲಿಸಲಾಗಿದ್ದು, ಓರ್ವ ಅಧಿಕಾರಿ ಹಾಗೂ 6 ಸಿಬ್ಬಂದಿಯನ್ನು ಬೇರೆಡೆಗೆ ಸ್ಥಳಾಂತರಿಸಲು ಉದ್ದೇಶಿಸಲಾಗಿದೆ.

ಊ) ಹೌದು. ಒಂದು ವರ್ಷದ ಅವಧಿಗೆ ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿ. ರವರಿಗೆ ಆಯ್ದ ಸ್ಥಳಗಳಲ್ಲಿ ಚಿನ್ನದ ನಿಕ್ಷೇಪ ಶೋಧನೆಗಾಗಿ ಟೆಸ್ಟ್ ಡ್ರಿಲ್ಲಿಂಗ್‌ಗಾಗಿ ನಿಬಂಧನೆಗಳಿಗೆ ಒಳಪಡಿಸಿ ಅನುಮತಿ ನೀಡಲಾಗಿದೆ.

5591(6324) : ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಕರ್ನಾಟಕ ಕೋ–ಆಪರೇಟಿವ್ ಸೊಸೈಟಿ ಆ್ಯಕ್ಟ್ 1959ರ ಅಧಿನಿಯಮದಲ್ಲಿ ಇರುವ ನ್ಯೂನ್ಯತೆಗಳಿಂದ ರೈತರಿಗೆ, ಸಾರ್ವಜನಿಕರಿಗೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಸದ್ಯದ ಕಾನೂನಿನಲ್ಲಿ ಆರ್ಬಿಟ್ರೇಟರರ ಏಕಪಕ್ಷೀಯ ತೀರ್ಪು ರೈತರ ವಿರುದ್ಧ, ಸಾರ್ವಜನಿಕರ ವಿರುದ್ಧ ಸುಸ್ತಿ ಬಡ್ಡಿ ಮತ್ತು ಇತರ ಎಲ್ಲಾ ವೆಚ್ಚಗಳನ್ನು ಸೇರಿ ಡಿಕ್ರಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

3. ಏಕಪಕ್ಷೀಯ ಡಿಕ್ರಿ ಆದೇಶದ ಪ್ರತಿಯನ್ನು ಸದರಿ ಆರ್ಬಿಟ್ರೇಟರು ಆಗಲೀ ಅಥವಾ ಸಂಬಂಧಪಟ್ಟ ಬ್ಯಾಂಕುಗಳಾಗಲೀ ಸಾಲಗಾರರಿಗೆ ನೀಡದೆ ವಂಚಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

4. ಸರ್ಕಾರವು ಈ ನ್ಯೂನ್ಯತೆಯನ್ನು ಬದಲಾಯಿಸಿ ಆರ್ಬಿಟ್ರೇಟರ್ ಬದಲು ಬ್ಯಾಂಕುಗಳು ನ್ಯಾಯಾಲಯದ ಮೂಲಕ ಸಾಲ ವಸೂಲಾತಿಗಾಗಿ ಅವಕಾಶವನ್ನು ಕಲ್ಪಿಸಿಕೊಡುವುದೇ?

5. ಈ ಕ್ರಮದಿಂದ ಸಾರ್ವಜನಿಕರಿಗೆ ಬ್ಯಾಂಕುಗಳಿಂದ ಸುಸ್ತಿ ಬಡ್ಡಿ ಮನ್ನಾ ಮಾಡಲು ಅನಾನುಕೂಲ ಉಂಟಾಗುವುದಿಲ್ಲವೇ?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು):

1. ಅಂತಹ ಅನಾನುಕೂಲವಾಗಿರುವ ಅಂಶ ಸರ್ಕಾರದ ಗಮನಕ್ಕೆ ರೈತ ಸಾರ್ವಜನಿಕರಿಂದ ಮತ್ತು ಸಹಕಾರ ಸಂಘಗಳಿಂದ ಬಂದಿರುವುದಿಲ್ಲ.

2. ಆರ್ಬಿಟ್ರೇಟರು ನೀಡುವ ಡಿಕ್ರಿಗಳಲ್ಲಿ ಸುಸ್ತಿಬಡ್ಡಿ ಮತ್ತು ಇತರ ವೆಚ್ಚವನ್ನು ಸೇರಿಸಲು ಕಾನೂನಿನಲ್ಲಿ ಅವಕಾಶವಿದೆ ದಾವಾ ಪ್ರಕರಣಗಳಲ್ಲಿ ಎದುರುದಾರರು ಗೈರುಹಾಜರಾದ ಪ್ರಸಂಗಗಳಲ್ಲಿ ಏಕ ಪಕ್ಷೀಯ ಡಿಕ್ರಿ ನೀಡಲು ಕಾನೂನಿನಲ್ಲಿ ಅವಕಾಶವಿದೆ.

3. ಬಂದಿಲ್ಲ. ಏಕಪಕ್ಷೀಯ ಡಿಕ್ರಿ ಆದೇಶದ ಪ್ರತಿಯನ್ನು ಸಾಲಗಾರ ಸದಸ್ಯರಿಗೆ ಸಂಬಂಧಪಟ್ಟ ಕಾರ್ಯವ್ಯಾಪ್ತಿಯ ನಿಬಂಧಕರ ಕಛೇರಿಯಲ್ಲಿ ನಿಗದಿತ ಶುಲ್ಕ ಪಾವತಿಯಾದ ನಂತರ ಪ್ರಮಾಣಿತ ಪ್ರತಿಯನ್ನು ನೀಡಲಾಗುತ್ತದೆ.